**ದಿನಾಂಕ:04-08-2023 ರಂದು ಸಾಕ್ಷಿಧಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ 11 ರಿಂದ 13, 15 ರಿಂದ 17 ನೇ ಪ್ರತಿವಾದಿ ಪರ ಶ್ರೀ.ಎಸ್.ಡಿ.ಎಂ ವಕೀಲರಿಂದ:**

ನನ್ನ ಅಜ್ಜ ರುದ್ರಗೌಡ ಹಾಗು ಬಸನಗೌಡರವರ ಹೆಸರಿನಲ್ಲಿಯಾಗಲೀ ಅಥವಾ ನಮ್ಮ ಕುಟುಂಬದವರ ಹೆಸರಿನಲ್ಲಿಯಾಗಲೀ ಅಕ್ಕಿ ಮಿಲ್ ಇರಲಿಲ್ಲ. ನನ್ನ ದೊಡ್ಡಪ್ಪ ಚನ್ನಬಸನಗೌಡ ರವರು ಬಸವಣ್ಣೆಪ್ಪ ಹಾವೇರಿ ರವರ ಬಳಿ ಗುಮಾಸ್ತನಾಗಿ ಕೆಲಸ ಮಾಡುತ್ತಿದ್ದರು ಎಂದರೆ ಸರಿಯಲ್ಲ. ಈ ಹಿಂದೆ ಪಾಟೀ ಸವಾಲು ಮಾಡಿದ ಸಂದರ್ಭದಲ್ಲಿ ನನ್ನ ದೊಡ್ಡಪ್ಪ ಚನ್ನಬಸನಗೌಡ ರವರು ಬಸವಣ್ಣೆಪ್ಪ ಹಾವೇರಿರವರ ಬಳಿ ಗುಮಾಸ್ತನಾಗಿ ಕೆಲಸ ಮಾಡುತ್ತಿದ್ದು ಎಂಬ ಪ್ರಶ್ನೆಗೆ ಇರಬಹುದು ಎಂದು ಸಾಕ್ಷ್ಯ ನುಡಿದಿದ್ದೇನೆ ಎಂದರೆ ಸರಿ. ನನ್ನ ತಾಯಿಯವರು ಮನೆಯಲ್ಲಿ ಓಡಾಡುವುದು, ಕಾರ್ಯಕ್ರಮಗಳಿಗೆ ಭಾಗವಹಿಸುವುದು ಮಾಡುತ್ತಾರೆ ಎಂದರೆ ಸಾಕ್ಷಿಯು ಓಡಾಡುತ್ತಾರೆ ಆದರೆ

ಕಾರ್ಯಕ್ರಮಗಳಿಗೆ ಹೋಗುವುದಿಲ್ಲ ಎಂದು ಸ್ವತಃ ನುಡಿಯುತ್ತಾರೆ . 2 ನೇ ವಾದಿಯರು ನನಗಿಂತ 7 ವರ್ಷ ಹಿರಿಯವರಾದ ಕಾರಣ ನನ್ನ ತಂದೆಯವರ ಏನು ವ್ಯವಹಾರ ಮಾಡುತ್ತಿದ್ದರು ಎಂಬ ಬಗ್ಗೆ ನನಗಿಂತ ಹೆಚ್ಚಿನ ಮಾಹಿತಿ ಆಕೆಗೆ ಇದೆ ಎಂದರೆ ಸರಿ. ಈ ಪ್ರಕರಣದಲ್ಲಿ ಸಾಕ್ಷಿ ನುಡಿಯಲು 2 ನೇ ವಾದಿ ನನಗೆ ಅಧಿಕಾರ ಪತ್ರವನ್ನು ಬರೆದುಕೊಟ್ಟಿರುವುದಿಲ್ಲ ವಾದಿ ನಂ. 1 ಮತ್ತು 2 ರವರು ನ್ಯಾಯಾಲಯಕ್ಕೆ ಬಂದು ಸಾಕ್ಷ್ಯ ಹೇಳಿದರೆ ನಮ್ಮ ಕುಟುಂಬದ ಎಲ್ಲಾ ವ್ಯವಹಾರಗಳ ವಿಚಾರ ಗೊತ್ತಾಗುತ್ತದೆ ಎಂದು ಹೇಳಿ ಅವರು ನ್ಯಾಯಾಲಯಕ್ಕೆ ಬರದೇ ನಾನು ಒಬ್ಬಳೇ ಸಾಕ್ಷ್ಯ ವಿಚಾರಣೆ ಹೇಳಲು ನ್ಯಾಯಾಲಯಕ್ಕೆ ಹಾಜರಾಗಿದ್ದೇನೆ ಎಂದರೆ ಸಾಕ್ಷಿಯು ಅವರಿಗೂ ಸಹ ಎಲ್ಲಾ ವಿಚಾರ ಗೊತ್ತಿದೆ ಎಂದು ಸ್ವತಃ ನುಡಿಯುತ್ತಾರೆ. ಮುಂದುವರೆದು ಅವರೆಲ್ಲರ ಒಪ್ಪಿಗೆಯ ಮೇರೆಗೆ ನಾನು ನ್ಯಾಯಾಲಯಕ್ಕೆ ಹಾಜರಾಗುತ್ತೇನೆ ಎಂದು ಸ್ವತಃ ನುಡಿಯುತ್ತಾರೆ. 1 ಮತ್ತು 2 ನೇ ವಾದಿಯರು ನಾನು ಸಾಕ್ಷ್ಯ ನುಡಿಯಲು ಒಪ್ಪಿಗೆ ನೀಡದೇ ಇದ್ದರೂ ಸಹ ಒಪ್ಪಿಗೆ ನೀಡಿದ್ದಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂರೆ ಸರಿಯಲ್ಲ.

1984 ರಲ್ಲಿಯೇ ನನ್ನ ಅಜ್ಜ ರುದ್ರಗೌಡರವರು ತನ್ನ ಮಕ್ಕಳಾದ ಶಿವನಗೌಡ, ಬಸನಗೌಡ ಕೂಡಿ ನಡೆಯಲು ಜಗಳ ಮಾಡಿದ ಕಾರಣ ರುದ್ರಗೌಡರವರು ತಮ್ಮ ಕುಟುಂಬದ ಕೆಲವು ಆಸ್ತಿಗಳಲ್ಲಿ ವಾಟ್ನಿ ಮಾಡಿಕೊಟ್ಟರು ಎಂದರೆ ಸರಿಯಲ್ಲ. ಈ ರೀತಿ ವಾಟ್ನಿ ಆದಂತೆ ರುದ್ರಗೌಡ ರವರು ದಿಃ06-07-1984 ರಂದು ಕಂದಾಯ ಇಲಾಖೆಗೆ ವರದಿ ನೀಡಿ ದಾಖಲೆಗಳನ್ನು ಮಾಡಿಸಿಕೊಟ್ಟರು ಎಂದರೆ ಸರಿಯಲ್ಲ. ಈ ಬಗ್ಗೆ ಡ ನಂಬರ 855 ಮಂಜೂರಾಗಿರುತ್ತದೆ ಎಂದರೆ ಸರಿಯಲ್ಲ. ಡ ನಂಬರ 855 ರಂತೆ ಸರ್ವೇ ನಂಬರ 34/2 ಬ 1 ಎಕರೆ 4 ಗುಂಟೆ ಅದೇ ರೀತಿ ಸರ್ವೇ ನಂಬರ 76 ರಲ್ಲಿ 1 ಎಕರೆ 19 ಗುಂಟೆ ಜಮೀದನು ಶಿವನಗೌಡ ತಂದೆ ರುದ್ರಗೌಡ ಹೆಸರಿಗೆ ಹೋಗಿರುತ್ತದೆ ಎಂದರೆ ಸರಿಯಲ್ಲ. ಅದೇ ರೀತಿ ಸರ್ವೇ ನಂಬರ 51 ರಲ್ಲಿ 2 ಎಕರೆ 3 ಗುಂಟೆ ಜಮೀನು ನಾಗನಗೌಡ ಪಾಟೀಲರವರ ಹೆಸರಿಗೆ ಹೋಗಿರುತ್ತದೆ ಎಂದರೆ ಸರಿಯಲ್ಲ. ಆ ಪ್ರಕಾರವಾಗಿ 1984 ರಿಂದಲೂ ಸಹ ಅವರ ಹಿಸ್ಸೆಗೆ ಬಂದ ಜಮೀನುಗಳಲ್ಲಿ ಕಬ್ಜಾ ವಹಿವಾಟು ಮಾಡುತ್ತಾ ಬಂದಿರುತ್ತಾರೆ ಎಂದರೆ ಸರಿಯಲ್ಲ. ಡ ನಂಬರ 855 ಅನ್ನು ರುದ್ರಗೌಡ ರವರಾಗಲೀ ಅಥವಾ ಅವರ ಮಕ್ಕಳುಗಳಾಗಲೀ ಹಾಗು ನಾವುಗಳು ಈವರೆಗೂ ಸಹ ಯಾವುದೇ ಪ್ರಾಧಿಕಾರದ ಮುಂದೆ ಪ್ರಶ್ನಿಸಿಲ್ಲ ಎಂದರೆ ಸಾಕ್ಷಿಯು ಈ ರೀತಿ ಡ ಮಂಜೂರು ಮಾಡಿದ ವಿಚಾರ ನಮಗೆ ಗೊತ್ತಿಲ್ಲದೇ ಇರುವುದರಿಂದ ಈ ಬಗ್ಗೆ ಯಾವುದೇ ಕ್ರಮ ಕೈಗೊಂಡಿಲ್ಲ ಎಂದು ಸ್ವತಃ ನುಡಿಯುತ್ತಾರೆ. ಅದೇ ರೀತಿ ದಿಃ06-07-1984 ರಂದು ಸರ್ವೇ ನಂಬರ 83/5 ಬ ರ

ಜಮೀನಿನಲ್ಲಿ ಚನ್ನಬಸನಗೌಡ ರುದ್ರಗೌಡ ಪಾಟೀಲ ರವರಿಗೆ 2 ಎಕರೆ 32 ಗುಂಟೆ, ಬಸನಗೌಡ ರುದ್ರಗೌಡ ಪಾಟೀಲ ರವರಿಗೆ 3 ಎಕರೆ ಜಮೀನು, ಐಯ್ಯನಗೌಡ ರುದ್ರಗೌಡ ಪಾಟೀಲ ರವರಿಗೆ 3 ಎಕರೆ ಜಮೀನು, ಹಿಸ್ಸೆಯ ಮೂಲಕ ಬಂದಿರುತ್ತದೆ ಎಂದರೆ ಸರಿಯಲ್ಲ. ಈ ಬಗ್ಗೆ ಡ ನಂಬರ 856 ಮಂಜೂರಾಗಿರುತ್ತದೆ ಎಂದರೆ ತನ್ನ ದೊಡ್ಡಪ್ಪನ ಸೇರಿ ಮಾಡಿರುತ್ತಾ ನಮಗೆ ಗೊತ್ತಿಲ್ಲ ಎಂದು ಸ್ವತಃ ನುಡಿಯುತ್ತಾರೆ. ಡ ನಂಬರ 856 ಅನ್ನು ರುದ್ರಗೌಡ ಪಾಟೀಲ ತನ್ನ ಜೀವಿತ ಅವಧಿಯಲ್ಲಿಯಾಗಲೀ ಆ ನಂತರ ಅವರ ವಾರಸುದಾರರಾಗಲೀ ಯಾವುದೇ ಪ್ರಾಧಿಕಾರದ ಮುಂದೆ ಪ್ರಶ್ನಿಸಿರುವುದಿಲ್ಲ ಎಂದರೆ ಅವುಗಳು ನಮ್ಮ ದೊಡ್ಡಪ್ಪನವರು ಮಾಡಿದ್ದು, ನಮಗೆ ಗೊತ್ತಿಲ್ಲ ಎಂದು ಸ್ವತಃ ನುಡಿಯುತ್ತಾರೆ. ಡ ನಂಬರ 855 ಮತ್ತು 856 ಇಂದಿಗೂ ಸಹ ಚಾಲ್ತಿಯಲ್ಲಿವೆ ಎಂದರೆ ಸರಿಯಲ್ಲ. ಡ ನಂಬರ 855 ಮತ್ತು 856 ರ ಪ್ರಕಾರ ತಮ್ಮ ಮಕ್ಕಳಿಗೆ ಹಿಸ್ಸೆ ಮಾಡಿಕೊಟ್ಟ ಆಸ್ತಿಯನ್ನು ಹೊರತುಪಡಿಸಿ ಉಳಿದ ಇತರೆ ಆಸ್ತಿಗಳು ರುದ್ರಗೌಡ ಪಟೀಲರವರ ವಹಿವಾಟಿಯಲ್ಲಿದ್ದವು ಎಂದರೆ ಸರಿಯಲ್ಲ. ಅವುಗಳನ್ನು ಹೊರತುಪಡಿಸಿ ಉಳಿದ ಆಸ್ತಿಗಳು ಯಾವು ಮತ್ತು ಯಾರ ಹೆಸರಿನಲ್ಲಿವೆ ಎಂಬುದು ನನಗೆ ಈಗ ಹೇಳಲಾಗುವುದಿಲ್ಲ. ಈ ಬಗ್ಗೆ ದಾಖಲೆಗಳನ್ನು ಹಾಜರುಪಡಿಸಿದ್ದೇನೆ ಎಂದು ಸ್ವತಃ ನುಡಿಯುತ್ತಾರೆ. ಆ ಹಿಸ್ಸೆಯಂತೆ ಅವರ ಪಾಲಿಗೆ ಬಂದ ಆಸ್ತಿಗಳಲ್ಲಿ ಅವರುಗಳೆ ಕಬ್ಜಾ ವಹಿವಾಟು ಮಾಡುತ್ತಾ ಬಂದಿದ್ದಾರೆ ಎಂದರೆ ಸರಿಯಲ್ಲ. ರುದ್ರಗೌಡ ರವರು ಯಾವ ವರ್ಷ ಮೃತಪಟ್ಟರು ಎಂಬುದು ನನಗೆ ನೆನಪಿಲ್ಲ. ಡ ನಂಬರ 855 ರ ಪ್ರಕಾರ ಕಬೂಲು ಮಾಡಿಕೊಳ್ಳಲು ರುದ್ರಗೌಡರ ಹೆಣ್ಣುಮಕ್ಕಳು ಸಹ ಸಮ್ಮತಿ ಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ಡ ನಂಬರ 855 ಮತ್ತು 856 ಅನ್ನು ನಾನು ನೋಡಿರುತ್ತೇನೆ. ಈಗ ತೋರುತ್ತಿರುವ ಡ ನಂಬರ 855 ರಲ್ಲಿ ರುದ್ರಗೌಡರ ಹೆಣ್ಣುಮಕ್ಕಳು ಸಮ್ಮತಿ ನೀಡಿರುವ ಬಗ್ಗೆ ನಮೂದಾಗಿರುತ್ತದೆ, ಆದರೆ ಅವರುಗಳು ಸಮ್ಮತಿ ನೀಡಿರುವುದಿಲ್ಲ. ರುದ್ರಗೌಡರ ಹೆಣ್ಣುಮಕ್ಕಳು ತಾವು ಸಮ್ಮತಿ ನೀಡಿಲ್ಲ ಎಂದು ಯಾವುದೇ ಪ್ರಾಧಿಕಾರ ಮುಂದೆ ಆ ಡ ವನ್ನು ಪ್ರಶ್ನಿಸಿಲ್ಲ ಎಂದರೆ ಸಾಕ್ಷಿಯು ಅವರಿಗ ತಿಳಿಸದೇ ಇರುವ ಕಾರಣ ಅದನ್ನು ಪ್ರಶ್ನಿಸಿಲ್ಲ ಎಂದು ಸ್ವತಃ ನುಡಿಯುತ್ತಾರೆ. ಡ ನಂಬರ 855 ಅನ್ನು ಮಂಜೂರು ಮಾಡುವ ಕಾಲಕ್ಕೆ ನಾನು ಆ ಸ್ಥಳದಲ್ಲಿ ಇರಲಿಲ್ಲ. ಈ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲದೆ ಇದ್ದರೂ ಸಹ ಡ ನಂಬರ 855 ಅನ್ನು ಮಂಜೂರು ಮಾಡಲು ಅವರುಗಳು ಸಮ್ಮತಿ ಕೊಟ್ಟಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಸರ್ವೇ ನಂಬರ 60 ರ ಆಸ್ತಿ ಚನ್ನಬಸನಗೌಡರ ಹೆಸರಿಗೆ ಸರಕಾರದಿಂದ ಮಂಜೂರಾದ ಆಸ್ತಿಯಾಗಿರುತ್ತದೆ. ಈ ಬಗ್ಗೆ ದಾಖಲೆಗಳನ್ನು ನಾನು ನೋಡಿರುತ್ತೇನೆ. ದಾವಾ ಆಸ್ತಿ ಸರ್ವೇ ನಂಬರ

60 ಮಂಜೂರಾಗುವುದಕ್ಕಿಂತ ಮೊದಲು ಯಾರ ಆಸ್ತಿ ಎಂಬುದನ್ನು ಈಗ ನಾನು ಹೇಳಲಾಗುವುದಿಲ್ಲ. ಸರ್ವೇ ನಂಬರ 60 ರ ಆಸ್ತಿ ರುದ್ರಗೌಡ ನ ಮನೆತನಕ್ಕೆ ರೈತಾಪಿ ನಾತೆಯಿಂದ ಬಂದ ಆಸ್ತಿಯಾಗಿರುತ್ತದೆ ಎಂದರೆ ಸಾಕ್ಷಿಯು 330/1 ರ ಆಸ್ತಿಯು ಸಹ ರೈತಾಪಿ ನಾತೆಯಿಂದ ಬಂದಂತಹ ಆಸ್ತಿಯಾಗಿರುತ್ತದೆ ಎಂದು ಸ್ವತಃ ನುಡಿಯುತ್ತಾರೆ. ಸರ್ವೇ ನಂಬರ 60 ರ ಆಸ್ತಿಯನ್ನು ಮಂಜೂರಾತಿ ಕೋರಿ ನಮೂನೆ 7 ಅನ್ನು ರುದ್ರಗೌಡರ ಅಣ್ಣ ಬಸನಗೌಡ್ರರವರು ಸಲ್ಲಿಸಿದ್ದಾರೆ ಎಂದರೆ ಸರಿಯಲ್ಲ. ಸರ್ವೇ ನಂಬರ 60 ರ ಆಸ್ತಿ ಮಾತ್ರ ನಮ್ಮ ಕುಟುಂಬದ ಘರಾಣೆಯಲ್ಲಿದ್ದ ಕಾರಣ ನಮೂನೆ 7 ಅನ್ನು ಸಲ್ಲಿಸಿದ್ದು, ಸರ್ವೇ ನಂಬರ 330/1 ರ ಆಸ್ತಿ ನಮ್ಮ ಕುಟುಂಬದ ಘರಾಣೆಯಲ್ಲಿ ಇಲ್ಲದೇ ಇರುವುದರಿಂದ ಆ ಆಸ್ತಿಯ ಮಂಜೂರಾತಿ ಕೋರಿ ನಮೂನೆ 7 ಅನ್ನು ಸಲ್ಲಿಸಿಲ್ಲ ಎಂದರೆ ಸರಿಯಲ್ಲ. ಸರ್ವೇ ನಂಬರ 330/1 ರ ಆಸ್ತಿ ನಮ್ಮ ಘರಾಣೆದ ರೈತಾಪಿ ಆಸ್ತಿ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಮ್ಮ ಅಜ್ಜ ರುದ್ರಗೌಡ ರವರು ದಿಃ15-12-2000 ರಂದು ಮೃತಪಟ್ಟಿರುತ್ತಾರೆ. ರುದ್ರಗೌಡರವರು ಸಾಯುವುದಕ್ಕಿಂತ ಮೊದಲು 1997 ರಂದು ಸರ್ವೇ ನಂಬರ 68 ರ ಪೈಕಿ 39 ಗುಂಟೆ ಜಮೀನನ್ನು ನನ್ನ ತಂದೆಯ ಹೆಸರಿಗೆ ಖರೀದಿಸಿದ್ದಾರೆ ಎಂದರೆ ಸರಿಯಲ್ಲ. ಅದೇ ರೀತಿ ರುದ್ರಗೌಡ ರವರು ಸಹ ತಮ್ಮ ಮಕ್ಕಳುಗಳಿಗೆ ಹಿಸ್ಸೆ ಮಾಡಿಕೊಟ್ಟ ಆಸ್ತಿಗಳನ್ನು ಹೊರತುಪಡಿಸಿ ತಮ್ಮ ಹೆಸರಿನಲ್ಲಿದ್ದ ಉಳಿದ ಆಸ್ತಿಗಳನ್ನು ದಿಃ02-12-2000 ರಂದು ಪುನಃ ಹಿಸ್ಸಾ ಮಾಡಿಕೊಟ್ಟರು ಎಂದರೆ ಸರಿಯಲ್ಲ. ಸಾಕ್ಷಿಯು ಚನ್ನಬಸನಗೌಡ ರವರು ಗ್ರಾಮ ಲೆಕ್ಕಾಧಿಕಾರಿಯ ಜೊತೆ ಓಡಾಡುತ್ತಿದ್ದ ಕಾರಣ ಏನು ಮಾಡಿಸಿಕೊಟ್ಟಿದ್ದರು ಎಂಬುದು ನನಗೆ ಗೊತ್ತಿಲ್ಲ ಎಂದು ಸ್ವತಃ ನುಡಿಯುತ್ತಾರೆ. ಈ ಬಗ್ಗೆ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ರುದ್ರಗೌಡ ರವರು ದಿಃ 02-12-2000 ದಂದು ಮಾಡಿಕೊಟ್ಟ ವಾಟ್ನಿ ಪ್ರಕಾರ ಡ ನಂಬರ 1053 ಅನ್ನು ಮಾಡಿಸಿದ್ದಾರೆ ಎಂದರೆ ಸರಿಯಲ್ಲ. ಸಾಕ್ಷಿಯು ಚನ್ನಬಸನಗೌಡ ರವರೆ ಈ ರೀತಿ ಮಾಡಿಸಿದ್ದಾರೆ ಎಂದು ಸ್ವತಃ ನುಡಿಯುತ್ತಾರೆ. ಡ ನಂಬ 1053 ರ ಪ್ರಕಾರ ರಿ ಸ ನಂಬರ 6 ರಲ್ಲಿ ಕ್ಷೇತ್ರ 1 ಎಕರೆ 8 ಗುಂಟೆ ಜಮೀನನ್ನು ತನ್ನ ಹೆಸರಿಗೆ ಇಟ್ಟುಕೊಂಡರು ಎಂದರೆ ನನಗೆ ಗೊತ್ತಿಲ್ಲ. ಅದೇ ರೀತಿ ಡ ನಂಬರ 1053 ರ ಪ್ರಕಾರ ಸರ್ವೇ ನಂಬರ 62/2 ಅ ರ ಆಸ್ತಿಯು 2 ಎಕರೆ 20 ಗುಂಟೆ ಜಮೀನು ನಾಗನಗೌಡ ಪಾಟೀಲ ರವರ ಹಿಸ್ಸೆಗೆ ಬಂದಿರುತ್ತದೆ ಎಂದರೆ ಸರಿಯಲ್ಲ. ಆ ಡ ಪ್ರಕಾರ ರಿ ಸ ಬನಂಬರ 65/2 ಅ ರಲ್ಲಿ 1 ಎಕರೆ 2 ಗುಂಟೆ ಜಮೀನು ಮತ್ತು ರಿ ಸ ನಂಬರ 76 1 ಎಕರೆ 19 ಗುಂಟೆ ಜಮೀನು ಚನ್ನಬಸನಗೌಡ ರವರ ಹಿಸ್ಸೆಗೆ ಬಂದಿರುತ್ತದೆ ಎಂದರೆ ಸರಿಯಲ್ಲ. ಆ ವಾಟ್ನಿಯಂತೆ ಸರ್ವೇ ನಂಬರ 10/2 1 ಎಕರೆ 23 ಗುಂಟೆ ಮತ್ತು ರಿ ಸ ನಂಬರ 34/2 ಬ 1

ಎಕರೆ 4 ಗುಂಟೆ ಜಮೀನು ನನ್ನ ಕಾಕಾ ಐಯ್ಯನಗೌಡ ರವರ ಹಿಸ್ಸೆಗೆ ಬಂದಿರುತ್ತದೆ ಎಂದರೆ ಸರಿಯಲ್ಲ. ಅದೇ ರೀತಿ ಸರ್ವೆ ನಂಬರ 10/1 1 ಎಕರೆ 25 ಗುಂಟೆ ಮತ್ತು ಸರ್ವೆ ನಂಬರ 60 5 ಎಕರೆ 22 ಗುಂಟೆ ಜಮೀನು ಶಿವನಗೌಡರ ಹೆಸರಿಗೆ ಹೋಗಿರುತ್ತದೆ ಎಂದರೆ ಸರಿಯಲ್ಲ. ಅದೇ ರೀತಿ 1984 ರಲ್ಲಿ ಮತ್ತು 1997 ರಂದು ಜಮೀನುಗಳನ್ನು ನನ್ನ ತಂದೆಯ ಹೆಸರಿಗೆ ಖರೀದಿಗೆ ಹಿಡಿದುಕೊಟ್ಟಿದ್ದ ಕಾರಣ 2000 ನೇ ಇಸ್ವಿಯಲ್ಲಿ ಆದ ವಾಟ್ನಿಯಲ್ಲಿ ನನ್ನ ತಂದೆಗೆ ಹಿಸ್ಸೆ ಕೊಟ್ಟಿಲ್ಲ ಎಂದರೆ ಸರಿಯಲ್ಲ. ಡ ನಂಬರ 1053 ನನ್ನ ಅಜ್ಜ ರುದ್ರಗೌಡ ರವರು ಮಂಜೂರು ಮಾಡಿಸಿದ್ದು ಅವರ ಜೀವಿತ ಅವಧಿಯಲ್ಲಿಯಾಗಲೀ ಅಥವಾ ಅವರ ವಾರಸುದಾರರಾಗಲೀ ಇವರೆಗೂ ಸಹ ಯಾವುದೇ ಪ್ರಾಧಿಕಾರದ ಮುಂದೆ ಪ್ರಶ್ನಿಸದೇ ಇರುವುದರಿಂದ ಇಂದಿಗೂ ಸಹ ಜೀವಂತವಾಗಿದೆ ಎಂದರೆ ಸರಿಯಲ್ಲ. ಡ ನಂಬರ 1053 ರ ಪ್ರಕಾರ ಅವರುಗಳ ಹಿಸ್ಸೆಗೆ ಬಂದಂತೆ ದಾಖಲೆಗಳನ್ನು ಅಂದರೆ ಪಹಣಿ ಪತ್ರಿಕೆಗಳು ಮಂಜೂರಾಗಿರುತ್ತವೆ ಎಂದರೆ ಸರಿಯಲ್ಲ. ಆ ಪ್ರಕಾರವಾಗಿ ತಮ್ಮ ತಮ್ಮ ಹಿಸ್ಸೆಗೆ ಬಂದ ಆಸ್ತಿಗಳಲ್ಲಿ ವಹಿವಾಟು ಮಾಡುತ್ತಾ ಬಂದಿದ್ದಾರೆ ಎಂದರೆ ಸರಿಯಲ್ಲ.

ನನ್ನ ತಂದೆಯವರು ದಿಃ24-01-2000 ರಂದು ಮೃತಪಟ್ಟಿರುತ್ತಾರೆ. ಈಗ ತೋರುತ್ತಿರುವ ವರದಿಯಲ್ಲಿರುವ ಸಹಿ ನನ್ನ ತಾಯಿಯದ್ದಾಗಿರುತ್ತದೆ. ಅದು ನಿಡಿ.1 ಎಂದು ಗುರುತಿಸಲಾಯಿತು. ನಿಡಿ.1 ರಂತಹ ವರದಿಯನ್ನು ನಾವುಗಳೇ ಕೊಟ್ಟಿರುತ್ತೇವೆ ಎಂದರೆ ಸರಿಯಲ್ಲ. ಈ ಬಗ್ಗೆ ಡ ನಂಬರ 1031 ಮಂಜೂರಾಗಿರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿಯು ನಮ್ಮ ಕಾಕಾನವರು ಹಿರಿತನ ಮಾಡುತ್ತಿದ್ದ ಕಾರಣ ಅವರು ಏನು ಮಾಡಿಲ್ಲ ಎಂಬುದು ನನಗೆ ಗೊತ್ತಿಲ್ಲ ಎಂದು ಸ್ವತಃ ನುಡಿಯುತ್ತಾರೆ. ಈ ಬಗ್ಗೆ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**(ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರ ಕೋರಿಕೆಯ ಮೇರೆಗೆ ಮುಂದುವರೆದ ಪಾಟೀ ಸವಾಲನ್ನು ಮುಂದೂಡಲಾಯಿತು )**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ನ. ಸ. ಓ. ಹೇ. ಕೆ ಸರಿ ಇದೆ

ಎಂದು ಒಪ್ಪಿರುತ್ತಾರೆ.

ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು

ಹಾನಗಲ್

ಸಾಕ್ಷಿದಾರರ ಸಹಿ